## ಹವ್ಯಾಸವೇ ಮದ್ದು

‘ಹಿರಿಯರ ಮನ; ಬಾಡಿತೆ ನಂದನ’ (ಜ. 09, ಮಂಜುಶ್ರೀ ಎಂ. ಕಡಕೋಳ) ಮುಖಪುಟ ಲೇಖನ ಎಲ್ಲ ಹಿರಿಯ ನಾಗರಿಕರಿಗೂ ದಾರಿದೀಪದಂತಿದ್ದು, ಓದಿ ಅರ್ಥ ಮಾಡಿಕೊಳ್ಳಲೇಬೇಕಾದ ಬರಹ. ಎರಡೂವರೆ ವರ್ಷಗಳ ಹಿಂದೆ ನಾನು ನಿವೃತ್ತನಾದೆ. ನಿವೃತ್ತ ಜೀವನ ನನಗೆ ತೊಡಕಾಗದಿರಲು ಮುಖ್ಯ ಕಾರಣ, ನನ್ನ ಕೆಲವು ಅಭ್ಯಾಸಗಳು. ನಾನು ನೌಕರಿಯಲ್ಲಿರುವಾಗಲೂ ರಜಾ ದಿನಗಳಲ್ಲಿ ಮನೆ ಸ್ವಚ್ಛ ಮಾಡುವುದು, ಓದುವುದು, ಬರೆಯುವುದರಲ್ಲಿ ತೊಡಗಿಸಿಕೊಳ್ಳುತ್ತಿದ್ದೆ. ಈಗಲೂ ನಾನು ಆ ಹವ್ಯಾಸಗಳನ್ನು ಮುಂದುವರಿಸುತ್ತಿದ್ದೇನೆ. ಹಾಗಾಗಿ ನನಗೆ ಒಂಟಿತನ ಕಾಡಿಲ್ಲ.

—ಬಿ.ಎನ್. ಭರತ್, ಬೆಂಗಳೂರು




## ಬೋಧಪ್ರದ

‘ಹಿರಿಯರ ಮನೋಲೋಕ’ದ ಅವಲೋಕ(ನ) ಮತ್ತು ವಿಶ್ಲೇಷಣ ಬೋಧಪ್ರದ. (ಸಕಾಲಿಕ ಸಹ).

—ಸಿಪಿಕೆ, ಮೈಸೂರು

## ಉತ್ತಮ ಸಲಹೆಗಳು

ಹಿರಿಯ ನಾಗರಿಕರು ಒಂಟಿತನದಿಂದ ಹೊರಬರಲು ತಿಳಿಸಿರುವ ಸಲಹೆಗಳು ‘ಸೀನಿಯರ್ಸ್ ಬೆಸ್ಟ್ ಅಡ್ವೈಸಸ್’ ಆಗಿವೆ. ಇಂದಿನ ಮಕ್ಕಳಿಗೂ ಭಾರದ ಬದುಕಿನ ಸಂಘರ್ಷಗಳಿರುವಾಗ ವಯಸ್ಸಾದ ನಾವೇ ಯಾರಿಗೂ ಭಾರವಾಗಲು ಬಯಸದೆ ನಮ್ಮದೇ ಪ್ರವೃತ್ತಿಗಳಲ್ಲಿ ತೊಡಗಿಸಿಕೊಂಡು ಸಮಾಜಸಂಗದಲ್ಲಿ ಬೆರೆತು ಒಂಟಿತನದ ಶಾಪದಿಂದ ಮುಕ್ತರಾಗಬಹುದು.

—ಜಿ.ಹೆಚ್. ಸಂಕಪ್ಪ

ಹಿರಿಯ ನಾಗರಿಕರ ಸಮಸ್ಯೆಗಳು ಹಾಗೂ ಪರಿಹಾರಗಳನ್ನು ಬಹಳ ಚೆನ್ನಾಗಿ ನಿರೂಪಿಸಿದ ಬರಹ.

—ಎಚ್.ವಿ. ಅನಂತಸುಬ್ಬರಾವ್

## ಕುತೂಹಲಕಾರಿ ಬರಹ

‘ಎಚ್ಚಮ ನಾಯಕ; ಕಲ್ಪಿತ ವ್ಯಕ್ತಿಯೆ? ಐತಿಹಾಸಿಕ ವೀರಸೇನಾನಿಯೇ?’ (ಜ. 09, ಟಿ.ಆರ್. ಅನಂತರಾಮು) ಲೇಖನದಲ್ಲಿ ಕನ್ನಡದ ಕಡುಗಲಿಯ ಬಗ್ಗೆ ಅಪಾರ ವಿಷಯವನ್ನು ಸಂಗ್ರಹಿಸಿದ್ದಾರೆ. ಅತ್ಯಂತ ರೋಚಕ ವಿಚಾರಗಳನ್ನು ತಿಳಿಸಿಕೊಟ್ಟಿದ್ದಾರೆ. ಎಚ್ಚಮ ನಾಯಕನೋ? ಯಚಮ ನಾಯ್ಡುವೋ? ಎಂಬುದನ್ನು ಸ್ಪಷ್ಟಪಡಿಸಿ, ವಿಜಯನಗರ ಸಾಮ್ರಾಜ್ಯಕ್ಕೆ ಈತನ ನಿಷ್ಠೆ, ಯಚಮನ ವಂಶಾವಳಿ ಮುಂತಾದ ಬಗ್ಗೆ ಕುತೂಹಲಭರಿತ ಅಂಶಗಳನ್ನು ತಿಳಿಸಿ, ಇನ್ನಷ್ಟು ಓದಬೇಕೆಂಬ ಹಂಬಲ ಉಂಟಾಗುವಂತೆ ಮಾಡಿದ್ದಾರೆ.

—ಮಹೇಶ್ ಎಸ್.ಹೆಚ್., ವಿಜಯನಗರ



## ಹೆಮ್ಮೆಯಾಯಿತು

ಎಚ್ಚಮ ನಾಯಕನ ಕುರಿತ ವಿಸ್ತ್ರತ ಲೇಖನ ಕುತೂಹಲಕಾರಿಯಾಗಿದೆ. ಎಚ್ಚಮ ನಾಯಕನ ಇತಿಹಾಸ, ಜೀವನ, ಸಾಹಸ ಓದಿ ಹೆಮ್ಮೆ, ಆಶ್ಚರ್ಯ ಆಯಿತು. ಎಚ್ಚಮ ಕೇವಲ ವೀರ ಸೈನಿಕ ಅಂದುಕೊಂಡಿದ್ದೆ. ಪಾಳೆಗಾರನೂ ಆಗಿದ್ದನೆಂಬುದು ತಿಳಿಯಿತು.

—ಸ್ಮಿತಾ ಮೈಸೂರು

## ಎಚ್ಚಮನ ನೆನಪುಗಳು

70ರ ದಶಕದಲ್ಲಿ ಮೈಸೂರಿನಲ್ಲಿ ಗಣೇಶೋತ್ಸವ ಸಂದರ್ಭದಲ್ಲಿ ವಿವಿಧೆಡೆ ಆಚರಿಸುತ್ತಿದ್ದ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಎಚ್ಚಮ ನಾಯಕ ನಾಟಕ ಕಡ್ಡಾಯವಾಗಿ ಪ್ರದರ್ಶಿಸಲ್ಪಡುತಿತ್ತು. ಆಗ ನೋಡಿದ, ಕೇಳಿದ ಸಂಭಾಷಣೆಗಳನ್ನು ಯಥಾವತ್ತಾಗಿ ನಿರೂಪಿಸಿ ಅಂದಿನ ದಿನಗಳನ್ನು ಕಣ್ಣಿಗೆ ಕಟ್ಟಿದಂತೆ ಬರೆದಿರುವುದು ಓದಿ ರೋಮಾಂಚನವಾಯಿತು.

—ಎನ್. ರಾಘವನ್, ಬೆಂಗಳೂರು

## ಸಂಶೋಧನಾತ್ಮಕ ಲೇಖನ

ಎಚ್ಚಮ ನಾಯಕನ ಬಗ್ಗೆ ಸಾಕಷ್ಟು ಮಾಹಿತಿಗಳನ್ನು ತಿಳಿಸಿತು. ಸಂಶೋಧನೆಯ ನಂತರ, ಬರಿಯ ಕಾಲ್ಪನಿಕ ಪಾತ್ರ ಎಂಬ ತೀರ್ಮಾನಕ್ಕೆ ಬಂದಿದ್ದರೆ, ನಾವು ವಿದ್ಯಾರ್ಥಿಗಳಾಗಿದ್ದ ಕಾಲದಿಂದ ಆ ವೀರಾವೇಶದ ಸಂಭಾಷಣೆಯ ಎಚ್ಚಮ ನಾಯಕನನ್ನು ಗೌರವದಿಂದ ನೆನೆಯುತ್ತಿದ್ದ ಭಾವಕೋಶಕ್ಕೆ ನಿಜವಾಗಿಯೂ ದೊಡ್ಡ ಪೆಟ್ಟೇ ನೀಡುತ್ತಿತ್ತು, ಆದರೆ ಲೇಖಕರು ಸಾಕಷ್ಟು ಸತ್ಯ ಸಂಗತಿಗಳನ್ನು ಕಲೆಹಾಕಿ ಎಚ್ಚಮ ನಾಯಕ ಕಲ್ಪಿತ ಪಾತ್ರವಲ್ಲ ಎಂದು ಕಂಡುಹಿಡಿದು, ಎದೆಯ ಸಂತಸ ಉಳಿಸಿದ್ದಾರೆ.

—ಎಲ್. ಗಿರಿಜಾ ರಾಜ್, ಬೆಂಗಳೂರು

## ಅಪರೂಪದ ಮಾಹಿತಿ

ಅಪರೂಪದ ಮಾಹಿತಿಯುಳ್ಳ ಲೇಖನ. 70ರ ದಶಕದಲ್ಲಿ ವಿದ್ಯಾರ್ಥಿಯಾಗಿದ್ದಾಗ ಆಡಿದ ಎಚ್ಚಮ ನಾಯಕ ನಾಟಕದ ನೆನಪಿನಂಗಳಕ್ಕೆ ಜಾರಿದೆ. ಎಚ್ಚಮ ನಾಯಕನಾಗಿ ಬಾಲ್ಯದ ಗೆಳೆಯ ಇಂದಿನ ಸಿಹಿಕಹಿ ಚಂದ್ರು ಅಮೋಘವಾಗಿ ನಟಿಸಿದ್ದರು. ಇತಿಹಾಸದ ಪುಟಗಳನ್ನು ಹೆಕ್ಕಿ ತೆಗೆದಿರುವುದು ಕುತೂಹಲಕಾರಿ.

—ಓಂಕಾರ್ ಗುರುಸಿದ್ದಪ್ಪ ಕೊಟ್ರೆ, ಬೆಂಗಳೂರು

## ‘ಪದಬಂಧ’ದಲ್ಲಿ ಲೋಪ

ಜನವರಿ 9ರ ಸಂಚಿಕೆಯಲ್ಲಿ ಪ್ರಕಟವಾದ ಪದಬಂಧದಲ್ಲಿ ತಪ್ಪಾಗಿದೆ. ಜ.16ರ ಸಂಚಿಕೆಯಲ್ಲಿ ಪ್ರಕಟವಾದ ಉತ್ತರಕ್ಕೆ ಹೋಲಿಕೆ ಮಾಡಿದರೆ, ತಪ್ಪುಗಳು ಕಂಡುಬರುತ್ತವೆ. ಈ ರೀತಿಯ ತಪ್ಪುಗಳಾಗುವುದು ಬೇಸರದ ಸಂಗತಿ.

—ವಿ.ಎಸ್. ರಾಮಮೂರ್ತಿ, ಚಿಕ್ಕಬಳ್ಳಾಪುರ

## ಶಿಕ್ಷಣ ವ್ಯವಸ್ಥೆಯ ಹುಳುಕಿಗೆ ಕನ್ನಡಿ

‘ಕನ್ನಡದ ಕಲಿಕೆಯಲ್ಲಿ ಕನ್ನಡದ ಮಕ್ಕಳೇ ಹಿಂದೆ’ (ಜ. 02, ರಘುನಾಥ ಚ.ಹ.) ‘ನಿಮ್ಮೊಡನೆ’ ಅಂಕಣದಲ್ಲಿ ಶೈಕ್ಷಣಿಕ ವ್ಯವಸ್ಥೆಯ ದುರ್ಬಲ ಸ್ಥಿತಿಯನ್ನು ಸ್ಪಷ್ಟವಾಗಿ ಚಿತ್ರಿಸಲಾಗಿದೆ. ಸ್ವತಃ ನಾನು ನನ್ನೂರ ಶಾಲೆಯ ಜೊತೆ ಅನೇಕ ವರ್ಷಗಳಿಂದ ಸಂಪರ್ಕದಲ್ಲಿದ್ದೇನೆ. ಇದರಿಂದ ಶಿಕ್ಷಕರು ಮತ್ತು ಮಕ್ಕಳ ಒಡನಾಟ ನಿರಂತರವಾಗಿದೆ. ಇವತ್ತು ಯಾವ ಮಗುವಿಗೂ ಶಿಕ್ಷಕರು ಬೈಯುವಂತಿಲ್ಲ, ಒಂದೇಟು ಹಾಕುವಂತಿಲ್ಲ. ನಪಾಸ್ ಮಾಡುವಂತೆಯೂ ಇಲ್ಲ. ಪಾಲಕರು–ಮಕ್ಕಳ ನಡುವೆ ಶಿಕ್ಷಕರಿಗೆ ಗೌರವ ಭಾವನೆಯೂ ಇಲ್ಲದಂತಾಗಿದೆ. ಇದೆಲ್ಲವನ್ನೂ ಶಿಕ್ಷಕ ಸಹಿಸಿಕೊಂಡು ತನ್ನ ಕರ್ತವ್ಯ ನಿರ್ವಹಿಸಬೇಕು. ಅನೇಕ ಕಡೆ ಕಾಯಂ ಶಿಕ್ಷಕರು ಇಲ್ಲ. ಅಂಥ ಕಡೆ ಅತಿಥಿ ಶಿಕ್ಷಕರು ಬರುತ್ತಾರೆ. ಅವರಿಗೆ ಕೂಲಿಕಾರ್ಮಿಕರಿಗಿಂತ ಕಡಿಮೆ ವೇತನ ನೀಡುವ ವ್ಯವಸ್ಥೆ ಇದೆ. ಇಂತಹದ್ದರಲ್ಲಿ ಅವರು ಮಕ್ಕಳ ಬಗ್ಗೆ ವಿಶೇಷ ಕಾಳಜಿಯನ್ನು ಹೇಗೆ ತೆಗೆದುಕೊಳ್ಳುತ್ತಾರೆ. ಒಟ್ಟಾರೆ ನಮ್ಮ ಶಿಕ್ಷಣ ವ್ಯವಸ್ಥೆಯ ಹುಳುಕನ್ನು ಕಣ್ಣು ತೆರೆದು ನೋಡುವಂತೆ ಮಾಡಿದೆ ಈ ಬರಹ.

—ಶಕುಂತಲಾ ರೆಡ್ಡಿ, ಬಳ್ಳಾರಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in